ಪ್ರವಾಸಿಗರ ವಾಹನ ನಿಲುಗಡೆ

(261) 152

ಶ್ರೀ ರುದ್ರೇಗೌಡ ವೈ.ಎಸ್ [ಬೇಲೂರು]

ಅ) ಬೇಲೂರು ಶ್ರೀ ಚೆನ್ನಕೇಶವ ದೇವಸ್ಥಾನದ ಸುತ್ತ ಪ್ರವಾಸಿಗರು ವಾಹನಗಳ ನಿಲುಗಡೆಯಿಂದಾಗಿ ದೇವಸ್ಥಾನದ ಭದ್ರತೆ ಹಾಗೂ ಪ್ರವಾಸಿಗರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ದೇವಸ್ಥಾನದ ಹಿಂಭಾಗದಲ್ಲಿ ರಾಜ್ಯ ಪ್ರವಾಸೋದ್ಯಮ ಇಲಾಖೆಯು ಖರೀದಿಸಿದ 10 ಎಕರೆ ಜಮೀನಿನಲ್ಲಿ ಪ್ರವಾಸಿಗರ ವಾಹನಗಳ ನಿಲುಗಡೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆನಂದ ಸಿಂಗ್
ಪ್ರವಾಸೋದ್ಯಮ ಸಚಿವರು

ಅ) ಹೌದು

ಆ) ಹಾಸನ ಜಿಲ್ಲೆಯ ಬೇಲೂರಿನ ಚೆನ್ನಕೇಶವ ದೇವಾಲಯದ ಹಿಂಭಾಗದಲ್ಲಿರುವ 12.01 ಎಕರೆ ಖಾಸಗಿ ಜಮೀನನ್ನು ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿಗಾಗಿ ಜಿಲ್ಲಾಧಿಕಾರಿಗಳು, ಹಾಸನ ರವರ ಮೂಲಕ ಖರೀದಿಸಲಾಗಿದೆ. ಸದರಿ ಜಮೀನಿನಲ್ಲಿ ಪಾರ್ಕಿಂಗ್, ಶೌಚಾಲಯ ಹಾಗೂ ಕುಡಿಯುವ ನೀರಿನ ಸೌಲಭ್ಯ, ಉಪಹಾರ ಗೃಹ ನಿರ್ಮಾಣ, ಮಕ್ಕಳ ಆಟದ ಸೌಲಭ್ಯ, ಮಾಹಿತಿಕೇಂದ್ರ ಹಾಗೂ ವಸತಿ ವ್ಯವಸ್ಥೆಗಳನ್ನು ರೂಪಿಸಲು ಉದ್ದೇಶಿಸಲಾಗಿದೆ. ಈ ಸಂಬಂಧ ಹಣಕಾಸಿನ ನೆರವು ನೀಡುವ ಬಗ್ಗೆ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಪಟ್ಟಿಯಲ್ಲಿ ಪ್ರಯಾರಟೈಸ್ ಮಾಡಲಾಗಿದೆ.